**ಮಂಜು:** ನಿನ್ನನ್ನು ಬಿಟ್ಟು ಇರಕ್ಕಾಗಲ್ಲ. ಐ ಲವ್ ಯು.
**ಚಂದು:** ನಿನ್ನ ಹುಟ್ಟು ನೋಡ್ಕೊಂಡಿದೀಯಾ? ಒಳ್ಳೆ ಬ್ರಾಂಡೆಡ್ ಸ್ಲಿಪ್ಪರ್ ಹಾಕೋ ಯೋಗ್ಯತೆ ಇಲ್ಲ. ನೀನು ನನ್ನನ್ನು ಲವ್ ಮಾಡ್ತಿಯಾ?
**ಅವನ ಗೆಳೆಯ:** ನನ್ನ ಫ್ರೆಂಡ್ ಯೋಗ್ಯತೆ ಬಗ್ಗೆ ಮಾತಾಡ್ತಿದ್ದೀರಾ? ನೂರಾರು ಜನಕ್ಕೆ ಅಕ್ಕಿ ಕೊಡೋ ಕೈ ಕಣ್ರೀ ಅದು.
**ಚಂದು:** ಹೌದಾ? ಏನು ಮಾಡ್ತಾರೆ?
**ಗೆಳೆಯ:** ಸೊಸೈಟಿಯಲ್ಲಿ ಅಕ್ಕಿ ಕೊಡ್ತಾರೆ.

ಒಬ್ಬನ ಯೋಚನೆ ಹೀಗಿರುತ್ತದೆ... ಸಣ್ಣವನಿದ್ದಾಗ ನನ್ನ ಅವ್ವ, 'ನಿನಗೆ ಗೊತ್ತಾಗಲ್ಲ ಸುಮ್ಮನಿರು' ಅಂತ ಹೇಳುತ್ತಿದ್ದಳು. ಮದುವೆ ಆದಾಗ ಹೆಂಡತಿ, 'ನಿಮಗೆ ಗೊತ್ತಾಗಲ್ಲ ಸುಮ್ಮನಿರಿ' ಅನ್ನುತ್ತಿದ್ದಳು. ಮುದುಕರಾದಾಗ ಮಕ್ಕಳು, 'ನಿಮಗೆ ಏನೂ ಗೊತ್ತಾಗಲ್ಲ' ಅನ್ನುತ್ತಿದ್ದಾರೆ. ಹೀಗಾದ್ರೆ, ನನಗೆ ಗೊತ್ತಾಗುವುದು ಯಾವಾಗ ಅಂತಾನೇ ನನಗೆ ಗೊತ್ತಾಗುವುದಿಲ್ಲ.

**ತಿಮ್ಮ:** ಬಾಳೆಹಣ್ಣು ತಿಂದರೆ ಎಲುಬುಗಳು ಗಟ್ಟಿಯಾಗುತ್ತವೆ.
**ನಿಂಗ:** ಅದೇ ಬಾಳೆಹಣ್ಣಿನ ಮೇಲೆ ಕಾಲಿಟ್ಟರೆ ಎಲುಬುಗಳು ಪುಡಿ ಪುಡಿಯಾಗುತ್ತವೆ.




**ಗಂಡ:** ಎಲ್ಲರಿಗೂ ನಿನ್ನಂತ ಹೆಂಡತಿಯೇ ಸಿಗಲಿ ಅಂತ ದಿನವೂ ದೇವರಲ್ಲಿ ಬೇಡಿಕೊಳ್ಳುತ್ತೇನೆ.
**ಹೆಂಡತಿ:** ಯಾಕೆ? ನಾನು ಅಷ್ಟೊಂದು ಒಳ್ಳೆಯವಳಾ?
**ಗಂಡ:** ಹಾಗೇನಿಲ್ಲ, ನಾನೊಬ್ಬನೇ ನರಕ ಯಾಕೆ ಅನುಭವಿಸಬೇಕು ಅಂತ?

**ಗಂಡ:** ನಾನು ತಪ್ಪಿಸಿಕೊಂಡರೆ?
**ಹೆಂಡತಿ:** ಜಾಹೀರಾತು ಕೊಡ್ತೀನಿ.
**ಗಂಡ:** ವಾಹ್.. ಏನಂತ ಕೊಡ್ತೀಯಾ?
**ಹೆಂಡತಿ:** ಗಂಡ ಬೇಕಾಗಿದ್ದಾನೆ.

**ಗಂಡ:** ನೀನು ದಿನಾ ಜಗಳ ಆಡುತ್ತೀಯ, ನನಗೆ ಶಾಂತಿ ಬೇಕು.
**ಹೆಂಡತಿ:** ನಿನಗೆ ಶಾಂತಿ ಬೇಕಾ? ನನಗೆ ಸಂತೋಷ ಬೇಕು.

**ಡಾಕ್ಟರ್:** ಒಂದೇ ಸಲ ನಾಲ್ಕು ಹಲ್ಲು ಹೇಗೆ ಬಿದ್ವು?
**ರೋಗಿ:** ಹೆಂಡತಿ ಮಾಡಿದ ಚಕ್ಕುಲಿ ತಿಂದು.
**ಡಾಕ್ಟರ್:** ಬೇಡ ಅನ್ನಬೇಕಿತ್ತು.
**ರೋಗಿ:** ತಿಂದಿದ್ದಕ್ಕೆ ಒಂದು ಹೋಯಿತು. ಬೇಡ ಅಂದಿದ್ದಕ್ಕೆ ಮತ್ತೆ ಮೂರು ಹೋದವು.

**ಗುಂಡ:** ಜೀವನದಲ್ಲಿ ಏನಾದರೂ ಸಾಧನೆ ಮಾಡುವುದಾದರೆ ಮದುವೆಗಿಂತ ಮೊದಲೇ ಮಾಡು.
**ಸುಂದರ:** ಏಕೆ?
**ಗುಂಡ:** ನಂತರ ಸಾಧನೆ ಮಾಡಿದರೆ, ಜನ ಹೆಂಡತಿಯ ಕಾಲ್ಗುಣ ಎನ್ನುತ್ತಾರೆ.










**ಟೀಚರ್:** ಯಾಕೋ ಗುಂಡ ನೀನ್ ಅಪ್ಲಿಕೇಷನ್ ಫಾರಂನಲ್ಲಿ ಬೇರೆ ಯಾರದೋ ಫೋಟೊ ಅಂಟಿಸಿದ್ದೀಯಾ?
**ಗುಂಡ:** ಅದು ನಮ್ ಅಕ್ಕನ ಗಂಡಂದು ಮೇಡಂ.
**ಟೀಚರ್:** ಯಾಕೋ ತಲೆಗಿಲೆ ಕೆಟ್ಟಿದ್ಯಾ ನಿನಗೆ?
**ಗುಂಡ:** ಇಲ್ಲಾ ಮೇಡಂ, ಫಾರಂನಲ್ಲಿ ಕೇಳಿದ್ದಾರೆ. ನಿಮ್ಮ ಭಾವಚಿತ್ರ ಅಂಟಿಸಿ ಅಂತಾ, ಅದಕ್ಕೇನೆ ಅಂಟಿಸಿದ್ದೇನೆ.

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು